ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿದೆ. ಪ್ರಾಥಮಿಕ ಶಾಲೆಗಳ ನೇಮಕಾತಿಯನ್ನು ಸಪ್ಟೆಂಬರ್ ಅಂತ್ಯಕ್ಕೂ ಹಾಗೂ ಪ್ರೌಢ ಶಾಲೆಗಳಲ್ಲಿನ ನೇಮಕಾತಿಯನ್ನು ಆಗಸ್ಟ್ ತಿಂಗಳ ಅಂತ್ಯಕ್ಕೆ ಮುಗಿಸಿ ಸದರಿ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಇ) ಬಂದಿದೆ. ಪ್ರಾಥಮಿಕ ಶಾಲೆಗಳು ಸಂಬಂಧಿಸಿದಂತೆ 1995-96ನೇ ಸಾಲಿನಲ್ಲಿ 19 ಶಾಲಾ ಕೊಠಡಿಗಳನ್ನು ನಿರ್ಮಿಸಲು 13.10 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಕಟ್ಟಡ ನಿರ್ಮಾಣ ಕೆಲಸ ಪ್ರಗತಿಯಲ್ಲಿದೆ.

ಪ್ರೌಡ ಶಾಲೆಗಳಲ್ಲಿ ಕಟ್ಟಡದ ಕೊರತೆ ಇರುವುದಿಲ್ಲ.

ವಿಷಯ:- ಬೆಂಗಳೂರ್ ನಗರದಲ್ಲಿ ಪಠ್ಯ ಪುಸ್ತಕಗಳ ಅಭಾವ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 472 (930)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1ರಿಂದ 10ನೇ ತರಗತಿಯವರೆಗೆ ಬೆಂಗಳೂರು ನಗರದಲ್ಲಿ ಸರ್ಕಾರಿ ನಿಗದಿಪಡಿಸಿರುವ ಪಠ್ಯಪುಸ್ತಕಗಳ ಬೇಡಿಕೆ ಎಷ್ಟು?

2) 1ರಿಂದ 10ನೇ ತರಗತಿಯವರೆಗೆ ಈ ಪಠ್ಯಪುಸ್ತಕಗಳು ಮಾರುಕಟ್ಟೆಯಲ್ಲಿ ಸುಲಭವಾಗಿ ದೊರೆಯುತ್ತಿವೆಯೇ?

3) ಪಠ್ಯಪುಸ್ತಕಗಳ ಅಭಾವದಿಂದ ಹಲವಾರು ಶಾಲೆಗಳಲ್ಲಿ ಪಾಠ ಪ್ರವಚನ ಪ್ರಾರಂಭವಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಹಾಗಿದ್ದಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1) 32,27,583

2) ದೊರೆಯುತ್ತಿವೆ.

3) ಶಾಲಾ ಪ್ರಾರಂಭದಲ್ಲಿ ಅಂದರೆ ಜೂನ್ ತಿಂಗಳ ಮೊದಲನೇ ವಾರದಲ್ಲಿ ಕೆಲವು ಪಠ್ಯಪುಸ್ತಕಗಳು ಮಾತ್ರ ಮಾರುಕಟ್ಟೆಯಲ್ಲಿ ಸಿಗುತ್ತಿರಲಿಲ್ಲ ನಂತರ ಇಲಾಖೆಯು ಈ ಕೊರತೆಯನ್ನು ನೀಗಿಸಿ ಈಗ ಎಲ್ಲಾ ಪುಸ್ತಕಗಳೂ ಮಕ್ಕಳಿಗೆ ದೊರೆಯುವಂತೆ ವ್ಯವಸ್ಥೆ ಮಾಡಿದೆ. ಹಾಗೂ ಶಿಕ್ಷಕರುಗಳು ಪಠ್ಯಪುಸ್ತಕಗಳು ಇಲ್ಲದೇ ಇದ್ದರೂ ಸಹ ಪಠ್ಯ ವಸ್ತುವಿನ ಆಧಾರದ ಮೇಲೆ ಪಾಠಗಳನ್ನು ಮಾಡುವ ಅರ್ಹತೆ ಹೊಂದಿರುವ ಕಾರಣ ಪಾಠಪ್ರವಚನಗಳಿಗೆ ಯಾವುದೇ ತೊಂದರೆ ಇಲ್ಲದಂತೆ ತರಗತಿಗಳನ್ನು ನಡೆಸಿರುತ್ತಾರೆ. ಆದಕಾರಣ ಪಾಠಪ್ರವಚನಗಳಿಗೆ ಯಾವುದೇ ತೊಂದರೆ ಉಂಟಾಗಿರುವುದಿಲ್ಲ.

4) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಭಾರತೀಯ ವೈದ್ಯ ಪದ್ಧತಿ ಇಲಾಖೆಯ ಹುದ್ದೆಗಳ ನೇಮಕಾತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ 473 (1109)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಾರತೀಯ ವೈದ್ಯಪದ್ಧತಿ ಇಲಾಖೆಯಲ್ಲಿ ಎ, ಬಿ, ಸಿ, ಡಿ ವರ್ಗಗಳಲ್ಲಿ ಖಾಲಿ ಇರುವ 918 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಆ) ಈ ವಿಷಯ ಯಾವ ಹಂತದಲ್ಲಿದೆ?

ಡಾ।। ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಅನುಬಂಧದಲ್ಲಿ ವಿವರಿಸಲಾಗಿದೆ.

ಆ) ಅನುಬಂಧದಲ್ಲಿ ವಿವರಿಸಲಾಗಿದೆ.

ವಿಧಾನಸಭಾಸದಸ್ಯರಾದ ಶ್ರೀ ಯು.ಆರ್.ಸಭಾಪತಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1109ಕ್ಕೆ ಅನುಬಂಧ.

ಭಾರತೀಯ ವೈದ್ಯಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ಈ ಕೆಳಕಂಡಂತೆ 918 ಹುದ್ದೆಗಳು ಖಾಲಿ ಇದ್ದು ಇವುಗಳಲ್ಲಿ ಭರ್ತಿಮಾಡಲು ಸರ್ಕಾರ ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ.

1) 'ಎ' ವರ್ಗ	-	048
2) 'ಬಿ' ವರ್ಗ	-	220
3) 'ಸಿ' ವರ್ಗ	-	260
4) 'ಡಿ' ವರ್ಗ	-	390
ಒಟ್ಟು	-	918

ಗ್ರೂಪ್-ಎ:- ಗ್ರೂಪ್-ಎ ವರ್ಗದಲ್ಲಿ 8 ಹುದ್ದೆಗಳನ್ನು ಪದೋನ್ನತಿಯಿಂದ ಭರ್ತಿ ಮಾಡಲಾಗಿದೆ. ಕರ್ನಾಟಕ ಲೋಕ ಸೇವಾ ಆಯೋಗ 5 ಹುದ್ದೆಗಳನ್ನು ಭರ್ತಿ ಮಾಡಲು (ಹೋಮಿಯೋಪತಿ ಪ್ರಾಚಾರ್ಯ ಹುದ್ದೆ ಮತ್ತು ಪ್ರಾಧ್ಯಾಪಕರು 4 ಹುದ್ದೆಗಳು) ಜಾಹೀರಾತು ದಿನಾಂಕ 18-12-95 ರಂದು ನೀಡಿದೆ.